# ಮತಮಂತ್ರ!






ಇರಲಿಲ್ಲ, ಈಗ ಬೆಲೆ ಇದ್ದರೂ ರೈತರ ಬಳಿ ಬೆಳೆ ಇಲ್ಲ, ಕಳೆದ ವರ್ಷ ರಾಗಿ ಸಂಪೂರ್ಣ ನೆಲ ಕಚ್ಚಿದ್ದರಿಂದ ಈ ಬಾರಿ ಬಂದ ರಾಗಿಯನ್ನು ರೈತರು ತಮ್ಮ ಬಳಿಯೇ ಇರಿಸಿಕೊಂಡಿದ್ದಾರೆ. ಕೃಷಿಕರ ವಿಚಾರಕ್ಕೆ ಬಂದಾಗ ಪರಸ್ಪರ ಆರೋಪ ಪ್ರತ್ಯಾರೋಪದಲ್ಲಿ ಕಾಲ ಕಳೆಯುವ ರಾಜಕೀಯ ಮುಖಂಡರು ಇದೀಗ ಮತ್ತೆ ರೈತರ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಅನ್ನದಾತನ ಮನೆ ಬಾಗಿಲಿಗೆ ಬರುತ್ತಿದ್ದಾರೆ. ಒಟ್ಟಾರೆ ರೈತನ ಸಂಕಷ್ಟಗಳಿಗೆ ರಾಜಕಾರಣಿಗಳಿಂದ ಪರಿಹಾರ ಮರೀಚಿಕೆಯಾಗಿದೆ.

# ರಾಮನಗರದಲ್ಲಿ 'ಮೇಕೆದಾಟು' ಕನಸು

■ **ಯಲುವಹಳ್ಳಿ ಬಿ. ಸದಾಶಿವ** ರಾಮನಗರ

ರಾಮನಗರ ಜಿಲ್ಲೆಯಲ್ಲಿ ಈ ಬಾರಿ ಚುನಾವಣೆಯಲ್ಲಿ ಪ್ರಮುಖವಾಗಿ ಚರ್ಚೆಯಾಗುವ ವಿಷಯ ಮೇಕೆದಾಟು ಯೋಜನೆ. ಜಿಲ್ಲೆಯ ಜನರ ಜೀವನಾಡಿ ಮೇಕೆದಾಟು ಯೋಜನೆ ಇನ್ನೂ ನಿರೀಕ್ಷಿತ ವೇಗ ಪಡೆದಿಲ್ಲ, ಹಲವು ವರ್ಷಗಳಿಂದ ನಡೆಯುತ್ತಿರುವ ಹೋರಾಟಗಾರರ ನೀರಿನ ಕೂಗು ಸರಕಾರಕ್ಕೆ ಕೇಳಿಸಿಯೇ ಇಲ್ಲ!

ಕುಡಿಯುವ ನೀರು, ನೀರಾವರಿ ಹಾಗೂ ವಿದ್ಯುತ್‌ಉತ್ಪಾದನೆ ಉದ್ದೇಶಕ್ಕಾಗಿ 5,912 ಕೋಟಿ ರೂ. ವೆಚ್ಚದಲ್ಲಿ 66.5 ಟಿಎಂಸಿ ಸಂಗ್ರಹ ಸಾಮರ್ಥ್ಯದ ಮೇಕೆದಾಟು ಅಣೆಕಟ್ಟೆ ಯೋಜನೆಯ ಡಿಪಿಆರ್ ಸಿದ್ಧವಾಗಿದೆ ಎಂಬ ಮಾಹಿತಿಯನ್ನು ಸರಕಾರ ನೀಡಿತ್ತು. 2017ರ ಫೆ.15ರಂದು ನಡೆದ ಸಚಿವ ಸಂಪುಟದ ಸಭೆಯಲ್ಲಿ ಸರಕಾರ ತಾತ್ವಿಕ ಅನುಮೋದನೆ ನೀಡಿತ್ತು. "ಮೇಕೆದಾಟು ಅಣೆಕಟ್ಟೆ ಯೋಜನೆಯ ಯೋಜನಾ ವರದಿಯನ್ನು ಕೇಂದ್ರ ಜಲ ಆಯೋಗ ಮತ್ತು ಕಾವೇರಿ ಮೇಲುಸ್ತುವಾರಿ ಸಮಿತಿಗೆ ಕಳುಹಿಸಲಾಗುವುದು. ಯೋಜನೆಗೆ ಅಗತ್ಯವಿರುವ ಪರಿಸರ, ಅರಣ್ಯ ಅನುಮೋದನೆಗಳನ್ನು ಪಡೆಯಲಾಗುವುದು," ಎಂದು ಕಾನೂನು, ಸಂಸದೀಯ ವ್ಯವಹಾರಗಳ ಸಚಿವ ಟಿ.ಬಿ ಜಯಚಂದ್ರ ತಿಳಿಸಿದ್ದರು.



**ಏನಾಗಬೇಕಿತ್ತು?:** ಕೇಂದ್ರ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಯೋಜನೆ ಕುರಿತು ಕ್ರಮ ಕೈಗೊಂಡ ಶಾಸ್ತ್ರ ಮಾತ್ರ ಮಾಡಲಾಗಿದೆ! ವಿವರವಾದ ಯೋಜನಾ ವರದಿಯನ್ನು ಕೇಂದ್ರ ಜಲ ಆಯೋಗದ ಗಮನಕ್ಕೆ ತಂದು ಯೋಜನೆಯ ಅಗತ್ಯವನ್ನು ಮನವರಿಕೆ ಮಾಡಿಕೊಡಬೇಕು. ಅರಣ್ಯ ಮತ್ತು ಪರಿಸರ ಇಲಾಖೆಗಳ ಅನುಮತಿ ಪಡೆಯಬೇಕು. ಕಾವೇರಿ ನದಿ ವಿಚಾರವಾಗಿರುವುದರಿಂದ ಕಾವೇರಿ ಫಲಾನುಭವಿಗಳ ನೆರೆ ರಾಜ್ಯಗಳ ಅನುಮತಿಯೂ ಅಗತ್ಯ. ಈ ನಿಟ್ಟಿನಲ್ಲಿ ಹೇಳಿಕೊಳ್ಳುವಂತಹ ಕೆಲಸಗಳಾಗಿಲ್ಲ.

● ಇಚ್ಛಾಶಕ್ತಿ ಕೊರತೆಯಿಂದ ಸರಕಾರಗಳು ಮೇಕೆದಾಟು ಯೋಜನೆಯನ್ನು ಜಾರಿಗೊಳಿಸುತ್ತಿಲ್ಲ, ನಾಡಿನ ರೈತರ ಹಿತದೃಷ್ಟಿಯಿಂದ ರೈತರ ಆತ್ಮಹತ್ಯೆ ತಡೆಯಲು ಮೇಕೆದಾಟು ಯೋಜನೆ ಜಾರಿ ಅತಿ ಶೀಘ್ರದಲ್ಲಿ ನಡೆಯಬೇಕು.

**- ಗೊ.ರಾ. ಶ್ರೀನಿವಾಸ್**
ಸಂಚಾಲಕ, ಮೇಕೆದಾಟು ಹೋರಾಟ ಸಮಿತಿ.




ಮೇಕೆದಾಟು ಬಳಿ 441.2 ಮೀ.ಎತ್ತರದ 66.5 ಟಿಎಂಸಿ ನೀರು ಸಂಗ್ರಹ ಸಾಮರ್ಥ್ಯದ ಅಣೆಕಟ್ಟೆ ನಿರ್ಮಿಸುವ ಯೋಜನೆ ಇದು. 440 ಮೀ.ನಲ್ಲಿ 64 ಟಿಎಂಸಿ ನೀರು ಸಂಗ್ರಹಿಸಲು ಅವಕಾಶವಿದೆ. 7.7 ಟಿಎಂಸಿ ನೀರು ಅಣೆಕಟ್ಟೆಯಲ್ಲಿ ಡೆಡ್ ಸ್ಟೋರೆಜ್ ಇರುತ್ತದೆ. 39.5 ಮೆ.ವ್ಯಾ ವಿದ್ಯುತ್ ಉತ್ಪಾದನೆಗೆ ಅವಕಾಶವಿದೆ. ಯೋಜನೆಯಿಂದ 4996 ಹೆಕ್ಟೇರ್ ಅರಣ್ಯ ಮುಳುಗಡೆಯಾಗಲಿದೆ.

---

## ಗೋಲ್ಡ್‌ಸ್ಟೋನ್ ಕಂಪನಿ ಜತೆ ಬಿಬಿಎಂಪಿ ಒಪ್ಪಂದ

# ವಿದ್ಯುತ್ ಚಾಲಿತ ಬಸ್ ಸಂಚಾರ 6 ತಿಂಗಳಲ್ಲಿ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಇನ್ನು ಆರು ತಿಂಗಳಲ್ಲೇ ವಿದ್ಯುತ್‌ಚಾಲಿತ ಬಸ್‌ಗಳು ಸಂಚರಿಸಲಿವೆ. ಹೈದರಾಬಾದ್ ಮೂಲದ ಗೋಲ್ಡ್‌ಸ್ಟೋನ್ ಎಮರ್ಜಿಂಗ್ ಕಂಪನಿಯು ಅತ್ಯಂತ ಕಡಿಮೆ ದರಕ್ಕೆ ಬಸ್‌ಗಳನ್ನು ಭೋಗ್ಯಕ್ಕೆ ನೀಡಲು ಮುಂದೆ ಬಂದಿದೆ.

ಭೋಗ್ಯದ ಆಧಾರದಲ್ಲಿ 150 ವಿದ್ಯುತ್‌ಚಾಲಿತ ಬಸ್‌ಗಳನ್ನು ಒದಗಿಸುವ ಕುರಿತು ಬಿಎಂಟಿಸಿಯು ಡಿಸೆಂಬರ್‌ನಲ್ಲಿ ಟೆಂಡರ್ ಕರೆದಿತ್ತು.

'ಮೊದಲ ಹಂತದಲ್ಲಿ 40 ಬಸ್‌ಗಳನ್ನು ಒದಗಿಸಲು ಕಂಪನಿಯು ಒಪ್ಪಿದೆ. ವಾಹನದ ಪ್ರತಿ ಕಿ.ಮೀ. ಕಾರ್ಯಾಚರಣೆಗೆ ನಾವು ₹37.50 ಶುಲ್ಕವನ್ನು ಕಂಪನಿಗೆ ಪಾವತಿಸಬೇಕು. ವಿದ್ಯುತ್ ಹಾಗೂ ನಿರ್ವಾಹಕರ ವೆಚ್ಚ ₹17 ಆಗುತ್ತದೆ. ಚಾರ್ಜಿಂಗ್ ಪಾಯಿಂಟ್‌ಗಳನ್ನು ಅವರೇ ನಿರ್ಮಿಸಲಿದ್ದಾರೆ. ಚಾಲಕರನ್ನೂ ಅವರೇ ಒದಗಿಸಲಿದ್ದಾರೆ' ಎಂದು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ವಿ.ಪೊನ್ನುರಾಜ್ ಹೇಳಿದರು.

ಈ ಬಸ್‌ಗಳಲ್ಲಿ 35 ಆಸನಗಳಿರುತ್ತವೆ. ವೋಲ್ವೊ ಬಸ್‌ನಲ್ಲಿರುವ ಎಲ್ಲ ಸೌಲಭ್ಯಗಳು ಇದರಲ್ಲೂ ಇರಲಿವೆ. ಇವು ಹೊರ ವರ್ತುಲ ರಸ್ತೆ ಹಾಗೂ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಸಂಪರ್ಕಿಸುವ ಬಳ್ಳಾರಿ ರಸ್ತೆಯಲ್ಲಿ ಸಂಚರಿಸಲಿವೆ. ಈ ಮಾರ್ಗಗಳಲ್ಲಿ ಕಾರ್ಯಾಚರಣೆ ನಡೆಸುತ್ತಿರುವ ವಜ್ರ ಬಸ್‌ಗಳು ಪ್ರತಿ ಕಿ.ಮೀ.ಗೆ ಸರಾಸರಿ ₹62 ವರಮಾನ ಗಳಿಸುತ್ತಿವೆ ಎಂದರು.

ಡೀಸೆಲ್ ಬೆಲೆ ಏರಿಕೆಯ ಬಳಿಕ ವೋಲ್ವೊ ಬಸ್‌ಗಳ ನಿರ್ವಹಣಾ ವೆಚ್ಚ ಹೆಚ್ಚಾಗಿದೆ. ಪ್ರತಿ ಬಸ್‌ಗೆ ಸರಾಸರಿ ₹70 ವೆಚ್ಚ ಮಾಡಬೇಕಿದೆ ಎಂದು ಹೇಳಿದರು.

'ಕೇಂದ್ರ ಸರ್ಕಾರವು 40 ಬಸ್‌ಗಳಿಗೆ ಮಾತ್ರ ತಲಾ ₹1 ಕೋಟಿ ಸಬ್ಸಿಡಿ ನೀಡಿದೆ. ಉಳಿದ 110 ಬಸ್‌ಗಳಿಗೆ ಸಬ್ಸಿಡಿ ನೀಡಿದರೆ, ಅಷ್ಟೂ ಬಸ್‌ಗಳನ್ನು ಭೋಗ್ಯಕ್ಕೆ ಶೀಘ್ರದಲ್ಲೇ ಪಡೆಯುತ್ತೇವೆ' ಎಂದು ಅವರು ತಿಳಿಸಿದರು.

ವಿದ್ಯುತ್‌ಚಾಲಿತ ವಾಹನಗಳನ್ನು ತಯಾರಿಸುವ ಚೀನಾದ ಬಿವೈಡಿ ಕಂಪನಿಯ ಜತೆ ಗೋಲ್ಡ್‌ಸ್ಟೋನ್ ಕಂಪನಿಯು ಒಪ್ಪಂದ ಮಾಡಿಕೊಂಡಿದೆ. ಬೀದರ್‌ನಲ್ಲಿ ವಾಹನ ತಯಾರಿಕಾ ಘಟಕವನ್ನು ಸ್ಥಾಪಿಸಲಿದೆ.

# 30 ರೂಫ್‌ಟಾಪ್ ಪಬ್ ಮುಚ್ಚಲು ಆದೇಶ

## ಸುರಕ್ಷತಾ ನಿಯಮ ಉಲ್ಲಂಘನೆ: ಬಿಬಿಎಂಪಿ ಕ್ರಮ

**ಬೆಂಗಳೂರು:** ಸುರಕ್ಷತಾ ನಿಯಮಗಳನ್ನು ಪಾಲಿಸದ ರೂಫ್‌ಟಾಪ್ ಪಬ್‌ಗಳು ಮತ್ತು ರೆಸ್ಟೋರೆಂಟ್‌ಗಳನ್ನು ಮುಚ್ಚುವಂತೆ ಸೂಚಿಸಿ ಬಿಬಿಎಂಪಿ ಆದೇಶ ಹೊರಡಿಸಿದೆ.

ರೂಫ್‌ಟಾಪ್‌ನಲ್ಲಿ ಕಾರ್ಯಾಚರಿಸುತ್ತಿರುವ 30 ಪಬ್‌ಗಳು ಮತ್ತು ರೆಸ್ಟೋರೆಂಟ್‌ಗಳು ಸುರಕ್ಷತಾ ನಿಯಮ ಪಾಲಿಸುತ್ತಿಲ್ಲ. ಅವುಗಳ ವ್ಯಾಪಾರ ಪರವಾನಗಿ ರದ್ದುಪಡಿಸಬೇಕು ಎಂದು ಕೋರಿ ಕರ್ನಾಟಕ ರಾಜ್ಯ ಅಗ್ನಿ ಮತ್ತು ತುರ್ತು ಸೇವೆಗಳ (ಕೆಎಸ್‌ಎಫ್‌ಇಎಸ್) ಇಲಾಖೆಯು ಕಳೆದ ವಾರ ಬಿಬಿಎಂಪಿಗೆ ಪತ್ರ ಬರೆದಿತ್ತು. ಇದರ ಬೆನ್ನಲ್ಲೇ ಪಾಲಿಕೆ ಕ್ರಮ ಕೈಗೊಂಡಿದೆ.

ಕೆಎಸ್‌ಎಫ್‌ಇಎಸ್‌ನ ಐಜಿಪಿ ಸೌಮ್ಯೇಂದು ಮುಖರ್ಜಿ, 'ಇವುಗಳ ಮಾಲೀಕರಿಗೆ 2-3 ಬಾರಿ ನೋಟಿಸ್ ನೀಡಿದ್ದೆವು. ಆ ಬಳಿಕವೂ ಅವರು ಸುರಕ್ಷತಾ ಕ್ರಮಗಳನ್ನು ಕೈಗೊಂಡಿಲ್ಲ. ಜನರ ಜೀವದ ಜೊತೆ ಅವರು ಆಟವಾಡುತ್ತಿದ್ದಾರೆ. ಹಾಗಾಗಿ ಪರವಾನಗಿ ರದ್ದುಪಡಿಸುವಂತೆ ಬಿಬಿಎಂಪಿಯನ್ನು ಕೋರಿದ್ದೆವು. ಅವುಗಳ ವಿದ್ಯುತ್ ಸಂಪರ್ಕವನ್ನೂ ಕಡಿತಗೊಳಿಸುವಂತೆ ಬೆಸ್ಕಾಂಗೂ ಪತ್ರ ಬರೆದಿದ್ದೇವೆ' ಎಂದು ತಿಳಿಸಿದರು.

ಬಿಬಿಎಂಪಿ ಜಂಟಿ ಆಯುಕ್ತ (ಆರೋಗ್ಯ ಮತ್ತು ಘನತ್ಯಾಜ್ಯ ನಿರ್ವಹಣೆ) ಸರ್ಫರಾಜ್ ಖಾನ್, 'ಪತ್ರವನ್ನು ಗಂಭೀರವಾಗಿ ಪರಿಗಣಿಸಿ ಈ ಮಳಿಗೆಗಳ ವ್ಯಾಪಾರ ಪರವಾನಗಿ ರದ್ದುಪಡಿಸುವಂತೆ ಅಧಿಕಾರಿಗಳಿಗೆ ಈಗಾಗಲೇ ಆದೇಶ ನೀಡಿದ್ದೇನೆ' ಎಂದರು.

### ಸುರಕ್ಷತಾ ನಿಯಮ ಪಾಲಿಸದ ರೂಫ್‌ಟಾಪ್ ಪಬ್/ರೆಸ್ಟೋರೆಂಟ್‌ಗಳು

- **ಇಂದಿರಾನಗರ:** ಹಮ್ಮಿಂಗ್ ಟ್ರೀ, ಎಸ್ಕೇಪ್ ಹೋಟೆಲ್, ಬಿ-ಫ್ಲ್ಯಾಟ್; ದ ಬ್ಲ್ಯಾಕ್ ರ್‍ಯಾಬಿಟ್ ಪಬ್, ಗೂಫೀಸ್ ಪಬ್
- **ದೊಮ್ಮಲೂರು:** ಲವ್ ಶಾಕ್, ನೈಟ್ ರೈಡರ್ಸ್ ಆ್ಯಂಡ್ ಲಿಯೊ ಸ್ಕೂಟ್ಸ್
- **ಕೋರಮಂಗಲ:** ಬಾರ್ಲೇಯ್ಝ್
- **ಚರ್ಚ್‌ಸ್ಟ್ರೀಟ್:** ಚರ್ಚ್ಸ್ ಇನ್
- **ಕೆ.ಎಚ್.ಡಬಲ್ ರಸ್ತೆ:** ಹೋಟೆಲ್ ಸಬರ್‌ವಾಲ್ ರೆಸಿಡೆನ್ಸಿ
- **ಶಾಂತಿನಗರ:** ಸ್ಕೈಲೈನ್ ರೆಸ್ಟೋರೆಂಟ್
- **ಜಯನಗರ 5ನೇ ಬ್ಲಾಕ್:** ಬಾರನ್ಸ್ ಇನ್
- **ಜೆ.ಪಿ.ನಗರ, 5ನೇ ಹಂತ:** ಬಾಟ್ಲ್ ಬ್ರೀಚರ್
- **ಜೆ.ಪಿ,ನಗರ 8ನೇ ಹಂತ:** ಶ್ರಾವಣ್ಯ ಬಾರ್ ಆ್ಯಂಡ್ ರೆಸ್ಟೋರೆಂಟ್
- **ವರ್ತುಲ ರಸ್ತೆ 2ನೇ ಹಂತ:** ಬ್ರೂವ್ ಸ್ಕೈ ಬಾರ್ ಆ್ಯಂಡ್ ಪಬ್
- **ಜೆ.ಪಿ.ನಗರ 1ನೇ ಹಂತ:** ಸ್ಟೋರೀಸ್ ಬಾರ್ ಪಬ್ ಆ್ಯಂಡ್ ರೆಸ್ಟೋರೆಂಟ್
- **ಜಯನಗರ 3ನೇ ಬ್ಲಾಕ್:** ಗುಫಾ ಬಾರ್ ಆ್ಯಂಡ್ ರೆಸ್ಟೋರೆಂಟ್
- **ವೈಟ್‌ಫೀಲ್ಡ್:** ಪಂಜಾಬಿ
- **ಮುನ್ನೇನಕೊಳಲು:** ಭಗಿನಿ ಬಾರ್
- **ರೆಸಿಡೆನ್ಸಿ ರಸ್ತೆ:** ಮಹೇಶ್ ಲಂಚ್ ಹೋಮ್
- **ಕುಂದಲಹಳ್ಳಿ ಗೇಟ್:** ಭಗಿನಿ ಐಕಾನ್ ಬ್ಯುಸಿನೆಸ್ ಹೋಟೆಲ್
- **ಮಿನರ್ವ ವೃತ್ತ:** ಹೋಟೆಲ್ ಸಬರ್‌ವಾಲ್ ವೈಸ್‌ರಾಯ್
- **ಆರ್‌ಬಿಐ ಬಡಾವಣೆ:** ಲಿಕ್ಕರ್ ಮಾರ್ಟ್
- **ಮತ್ತಿಕೆರೆ:** ಸ್ಮೋಕೀಸ್
- **ರಾಜಾಜಿನಗರ:** ಅಭಿಮಾನಿ ವಸತಿ
- **ಹೆಬ್ಬಾಳ:** ರಾಯಲ್ ಸೊನಾಟ
- **ನಾಗವಾರ:** ಝ್ಯುಕಾ ರೆಸ್ಟೋರೆಂಟ್
- **ಬಾಣಸವಾಡಿ:** ದಿವಾಕರ್ ಬಾರ್ ಆ್ಯಂಡ್ ರೋಟಿ ಲ್ಯಾಂಡ್
- **ಕಲ್ಯಾಣ ನಗರ:** ಬಾಟಮ್ಸ್ ಅಪ್

[illegible] ಪು-5 7-3-18

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

CIN: U40109KA1999SGC025521

ಸಂಖ್ಯೆ: ಕವಿಪ್ರನಿನಿ/ಬಿ16/40360/2016-17 ದಿನಾಂಕ: 06.03.2018

## ನೇಮಕಾತಿ – ಅಂತಿಮ ಆಯ್ಕೆ ಪಟ್ಟಿ ಪ್ರಕಟಣೆ

### ಅಧಿಸೂಚನೆ

**ವಿಷಯ:** ಕವಿಪ್ರನಿನಿಯಲ್ಲಿ ಸಹಾಯಕ ಇಂಜಿನಿಯರ್(ವಿದ್ಯುತ್), ಸಹಾಯಕ ಲೆಕ್ಕಾಧಿಕಾರಿ, ಕಿರಿಯ ಇಂಜಿನಿಯರ್ (ವಿದ್ಯುತ್/ಕಾಮಗಾರಿ), ಸಹಾಯಕ ಹಾಗೂ ಕಿರಿಯ ಸಹಾಯಕ ಹುದ್ದೆಗಳಿಗೆ ಆಯ್ಕೆಯಾಗಿರುವ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

**ಉಲ್ಲೇಖ:** 1. ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/40360/2016-17, ದಿನಾಂಕ: 08.09.2016.

2. ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಣೆಯ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ16/40360/2016-17 ದಿನಾಂಕ: 27.01.2018.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/40360/2016-17, ದಿನಾಂಕ: 08.09.2016 ಕ್ಕೆ ಅನುಗುಣವಾಗಿ **ಆನ್-ಲೈನ್ ಅಪ್ಟಿಟ್ಯೂಡ್ ಟೆಸ್ಟ್**‌ನಲ್ಲಿ ಗಳಿಸಿರುವ ಅಂಕಗಳ **ಜ್ಯೇಷ್ಠತೆಯ ಆಧಾರದ ಮೇರೆಗೆ** ಸಹಾಯಕ ಇಂಜಿನಿಯರ್(ವಿದ್ಯುತ್), ಸಹಾಯಕ ಲೆಕ್ಕಾಧಿಕಾರಿ, ಕಿರಿಯ ಇಂಜಿನಿಯರ್(ವಿದ್ಯುತ್/ಕಾಮಗಾರಿ), ಸಹಾಯಕ ಹಾಗೂ ಕಿರಿಯ ಸಹಾಯಕ ಹುದ್ದೆಗಳಿಗೆ ಕವಿಪ್ರನಿನಿಯಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಕಟ್-ಆಫ್ (Cut-Off)/ Equi-Percentile ಅಂಕಗಳೊಂದಿಗೆ ದಿನಾಂಕ: 27.01.2018 ರಂದು ಕವಿಪ್ರನಿನಿಯ ಅಂತರ್ಜಾಲದಲ್ಲಿ ಪ್ರಕಟಿಸಲಾಗಿತ್ತು.

ಸದರಿ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಅಭ್ಯರ್ಥಿಗಳು ನಿಗಧಿತ ಅವಧಿಯೊಳಗೆ ಇ-ಮೇಲ್ ಮೂಲಕ ಸಲ್ಲಿಸಿದ್ದ ಅರ್ಹ ಆಕ್ಷೇಪಣೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿದ್ದು, ಅದರನ್ವಯ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ಕಟ್-ಆಫ್ (Cut-Off)/ Equi-Percentile ಅಂಕಗಳೊಂದಿಗೆ ಕವಿಪ್ರನಿನಿ ಅಂತರ್ಜಾಲ **www.kptcl.com,** ದಲ್ಲಿ ಪ್ರಕಟಿಸಲಾಗಿದೆ.

ಮುಂದುವರೆದು ಪ್ರಕಟಿತ ಹುದ್ದೆಗಳಿಗೆ ನಿಗಧಿಪಡಿಸಿದ ವೈಕಲ್ಯತೆ ಹೊಂದಿರುವ ಅರ್ಹ ಅಭ್ಯರ್ಥಿಗಳ ಕೊರತೆಯಿಂದಾಗಿ ವಿಕಲಚೇತನ ಕೋಟಾದಡಿಯಲ್ಲಿ ಭರ್ತಿಯಾಗದೇ ಇರುವ ಹುದ್ದೆಗಳನ್ನು ಬ್ಯಾಕಲಾಕ್ ಹುದ್ದೆಗಳೆಂದು ಪರಿಗಣಿಸಲಾಗಿದ್ದು, ಅನುಬಂಧ-1 ರಲ್ಲಿ ಪ್ರಕಟಿಸಲಾಗಿದೆ.

ಸಹಿ/-
**ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ),**
ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು-560 009.

Deccan Herald 7.3.18 (2).

# KARNATAKA POWER TRANSMISSION CORPORATION LIMITED

CIN: U40109KA1999SGC025521

No: KPTCL/B16/40360/2016-17 DATED: 06.03.2018

## RECRUITMENT- PUBLISHING OF FINAL SELECTION LIST

### NOTIFICATION

**Sub:** Publication of Final Selection List for the post of Assistant Engineer (Elec.), Assistant Accounts Officer, Junior Engineer(Ele/Civil), Assistant and Junior Assistant in KPTCL-Reg.

**Ref:** 1. Employment Notification No: KPTCL/B16/40360/2016-17dated: 08.09.2016.

2. Publication of Provisional Selection list Notification No: KPTCL/B16/40360/2016-17 dated: 27.01.2018.

In pursuance to KPTCL Employment Notification No: KPTCL/B16/40360/2016-17 dated: 08.09.2016, the Provisional List of candidates selected **purely on merit** on the basis of the marks secured in the **Online Aptitude Test** for recruitment to the post of Assistant Engineer (Elecl), Assistant Accounts Officer, Junior Engineer (Ele/Civil), Assistant and Junior Assistant in KPTCL was published along with provisional cut-off marks/Equi-percentile on 27.01.2018 in KPTCL Website.

All the representations/objections filed by the candidates through E-mail within the stipulated date on the Provisional Selection List have been examined and all the valid objections are considered and pursuant to the same, the **FINAL SELECTION LIST** of candidates along with Cut-Off marks/Equi-Percentile is published in **www.kptcl.com.**

Further the details of posts unfilled due to non availability of eligible candidates with the disabilities notified against each post under PH quota are kept as Backlog and published in Annexure-1.

Sd/-
**Director (Admn. & HR)**
Corporate Office, KPTCL, Kaveri Bhavan, Bengaluru - 560 009.